# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕೆಂಪೇಗೌಡನಗರ ಉಪವಿಭಾಗ,
ಬೃ.ಬೆಂ.ಮ.ಪಾಲಿಕೆ ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು

ಸಂಖ್ಯೆ:ಸ.ಇಂ/ವಾ-119/ವಾರ್ಡ್ ಸಭೆ/2022-23

ದಿನಾಂಕ: 18-06-2022

## ವಾರ್ಡ್ -119ರ ವಾರ್ಡ್ ಸಭೆಯ ನಡವಳಿ

ದಿನಾಂಕ:18-06-2022 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್-119 ರ ವಾರ್ಡ್ ಕಛೇರಿಯಲ್ಲಿ ಶ್ರೀ.ಎಸ್.ಟಿ.ಶ್ರೀನಿವಾಸ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು(ಟಿ.ಇ.ಸಿ)ವಿಭಾಗ ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

**ಹಾಜರಿದವರು:-**

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ.ಎಸ್.ಟಿ.ಶ್ರೀನಿವಾಸ್ | ನೋಡಲ್ ಅಧಿಕಾರಿಗಳು | 9739520995 |
| 2 | ಶ್ರೀ.ಎನ್.ಕೆ.ಸತ್ಯ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:119 | 9480688119 |
| 3 | ಆರ್.ದೊರೈಸ್ವಾಮಿ | ಕಂದಾಯ ಪರಿವೀಕ್ಷಕರು ವಾರ್ಡ್-119 | 9900595529 |
| 4 | ಮಹದೇವಪ್ಪ | ಕಿರಿಯ ಅಭಿಯಂತರರು ಬೆಸ್ಕಾಂ | 9449875558 |
| 5 | ಬಿ.ಎಲ್.ಅರವಿಂದ್ | ಕೆಲಸ ಪರಿವೀಕ್ಷಕರು-ಬಿ.ಡಬ್ಲ್ಯೂ.ಎಸ್.ಎಸ್.ಬಿ | 9448314149 |
| 6 | ಎಂ.ಬಾಬುಕುಮಾರ್ | ಕೆಲಸ ಪರಿವೀಕ್ಷಕರು ವಾರ್ಡ್-119 | 9008233973 |
| 7 | ಎನ್.ನಾಗರಾಜು | ಕಿರಿಯ ಆರೋಗ್ಯ ಪರಿವೀಕ್ಷಕರು | 8073493562 |
| 8 | ಸಂದೇಶ್.ಹಚ್.ಎಂ | ಸ.ಅ(ವಾರ್ಡ್-119) | 9611667101 |
| 9 | ಮಂಜುನಾಥ್ | ಸ್ಥಳೀಯರು | 9880464333 |
| 10 | ರಾಕೇಶ್ | ಸ್ಥಳೀಯರು | 7019916203 |
| 11 | ಕೆ.ಸತೀಶ್ | ಸ್ಥಳೀಯರು | 7899555577 |
| 12 | ವಿನೋದ್ | ಸ್ಥಳೀಯರು | 7204227806 |
| 13 | ವಿಜಯ್‌ಕುಮಾರ್ | ಸ್ಥಳೀಯರು | 8123055742 |

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಎಲ್ಲರನ್ನು ಸ್ವಾಗತದೊಂದಿಗೆ ಪರಸ್ಪರ ಪರಿಚಯ ಮಾಡಿಕೊಳ್ಳಲು ತಿಳಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

**ಚರ್ಚಿಸಲಾದ ವಿಷಯಗಳು:-**

1. **ಕಾಮಗಾರಿ ಇಲಾಖೆ:-**

ಕಾಮಗಾರಿ ವಿಷಯವಾಗಿ ಚರ್ಚಿಸಲಾಗಿ ಸ್ಥಳೀಯರು ಎಸ್.ಜೆ.ಪಿ.ರಸ್ತೆಯಲ್ಲಿ ನಡೆಯುತ್ತಿರುವ ಚರಂಡಿ ಕಾಮಗಾರಿ ಹಾಗೂ ಪದಾಚಾರಿ ಕೆಲಸ ವಿಳಂಭವಾಗಿ ನಡೆಯುತ್ತಿದ್ದು, ರಸ್ತೆಯ ಪಕ್ಕದಲ್ಲಿ ಚರಂಡಿಯಿಂದ ತೆಗೆಯುತ್ತಿರುವ ಹೂಳು ರಸ್ತೆಯಲ್ಲಿಯೇ ಬಿಟ್ಟಿರುತ್ತದೆ.ಅದನ್ನು ತೀವ್ರ ಗತಿಯಲ್ಲಿ ತೆಗೆಯುವಂತೆ ಸೂಚಿಸಿರುತ್ತಾರೆ. ಮತ್ತು ಚರಂಡಿಯ ಮೇಲೆ ಅಳವಡಿಸಿರುವ ಸ್ಲಾಬ್‌ಗಳು ಅಳಾಗಿದ್ದು, ಅವುಗಳನ್ನು ಮುಚ್ಚಿಕೊಡಲು ಹಾಗೂ ಮಳೆಯಿಂದ ಮುಂದೆ ಅನಾಹುತಗಳನ್ನು ತಪ್ಪಿಸಲು ಕೋರಿರುತ್ತಾರೆ.

ಈ ವಿಷಯದ ಬಗ್ಗೆ ವಾರ್ಡಿನ ಅಭಿಯಂತರರು ರವರು ಮಾತನಾಡಿ ಕಾಮಗಾರಿ ಪ್ರಗತಿಯಲ್ಲಿದ್ದು, ಅದಷ್ಟು ಬೇಗ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಮತ್ತು ರಸ್ತೆಯ ಮೇಲೆ ಶೇಖರಿಸಿರುವ ಚರಂಡಿಯ ಹೂಳನ್ನು ತಕ್ಷಣವೇ ತೆರವುಗೊಳಿಸಲು ಗುತ್ತಿಗೆದಾರರಿಗೆ ತಿಳಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

2. **ಘನತ್ಯಾಜ್ಯ ವಿಭಾಗ:-**

ಗೌಡನ್ ಸ್ಟ್ರೀಟ್‌ನಲ್ಲಿ ರಸ್ತೆಯ ಪಕ್ಕದಲ್ಲಿ ಕೋರಿರುತ್ತಾರೆ.

3. **ಆರೋಗ್ಯ ಇಲಾಖೆ**

ಸಭೆಯಲ್ಲಿ ಸ್ಥಳೀಯರು ಮಾತನಾಡಿ, ವಾರ್ಡ್‌ನಲ್ಲಿ ಸೊಳ್ಳೆಗಳು ಹೆಚ್ಚಾಗಿರುವುದರಿಂದ Fogging and Spraying ಅನ್ನು ಮಾಡಲು ಕೋರಿರುತ್ತಾರೆ.

4. **ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆ**

ಓ.ಟಿ.ಸಿ. ರಸ್ತೆ ಹಾಗೂ ಷೇರಖಾನ್ ಗಲ್ಲಿಯಲ್ಲಿ ಬರುವ ರಸ್ತೆಯಲ್ಲಿ ಒಳಚರಂಡಿ ನೀರು ನಿಂತಿದ್ದು, ಈ ಕೂಡಲೇ ಒಳಚರಂಡಿಯನ್ನು ದುರಸ್ಥಿಗೊಳಿಸಿ ನೀರು ಸರಾಗವಾಗಿ ಹೋಗಲು ಸಭೆಯಲ್ಲಿ ಸೂಚಿಸಲಾಗಿರುತ್ತದೆ. ನಿಮ್ಮ ವತಿಯಿಂದ ಅನಧಿಕೃತವಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಕೆಲಸ ಪರಿವೀಕ್ಷಕರಿಗೆ ಮಳೆ ಹೆಚ್ಚಾಗಿರುವುದರಿಂದ ದೂರುಗಳನ್ನು ಕೂಡಲೇ ಸ್ಪಂದಿಸಬೇಕೆಂದು ತಿಳಿಸಿರುತ್ತಾರೆ ಹಾಗೂ ಮುಂದಿನ ಸಭೆಗೆ ಕಡ್ಡಾಯವಾಗಿ ಎಲ್ಲಾ ಅಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸೂಚಿಸಿ, ತಪ್ಪಿದಲ್ಲಿ ಹಾಜರಾಗದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಲು ತಿಳಿಸಿರುತ್ತಾರೆ. ಹಾಜರಿದ್ದ ಅಧಿಕಾರಿಗಳಿಗೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

18/6/2022

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ –119 ಧರ್ಮರಾಯಸ್ವಾಮಿ ದೇವಸ್ಥಾನ

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 119